O.S.No.198/2020
PW -1

ದಿನಾಂಕ 06/12/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಡಿ.ವಿ.ಎಸ್. ಪ್ರತಿವಾದಿ ಪರ ವಕೀಲರಿಂದ**

ಬನೂತಿ ರಂಗಯ್ಯ ಇವರನ್ನು ನಾನು ನೋಡಿರುತ್ತೇನೆ. ಅವರಿಗೆ 5 ಜನ ಮಕ್ಕಳು ಇದು ಅವರಗುಳು ರಂಗಪ್ಪ , ಆಂಜನಪ್ಪ , ವೆಂಕಟರಮಣಯ್ಯ ನಾಗೇಶಪ್ಪ ರಂಗದಾಮಯ್ಯ ಎಂದು 3 ಜನ ಹೆಣ್ಣು ಮಕ್ಕಳು ಅವರುಗಳು ಗಂಗಮ್ಮ , ಹನುಮಕ್ಕ ಮತ್ತು ಅಕ್ಕಮ್ಮ ಇರುತ್ತಾರೆ. ಗಂಗಮ್ಮ ಮತ್ತು ಅಕ್ಕಮ್ಮ ಜೀವಂತ ಇರುತ್ತಾರೆ. ನಾನು ಹಾಜರುಪಡಿಸಿರುವ ವಂಶವೃಕ್ಷದಲ್ಲಿ ಅವರನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ವೆಂಕಟರಮಣಯ್ಯ ಜೀವಂತ ಇರುವುದಿಲ್ಲ ಅವರಿಗೆ ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಸದರಿಯವರನ್ನು ವಂಶವೃಕ್ಷದಲ್ಲಿ ಸೇರಿರುವುದಿಲ್ಲ ಎಂದರೆ ಸರಿ. ರಂಗದಾಮಯ್ಯ ರವರಿಗೆ ಓದು ಬರಹ ಬರುವುದಿಲ್ಲ ಎಂದರೆ ಸರಿ, ಸರಿ ಮಾಡಲು ಬರುವುದಿಲ್ಲ, ಸದರಿಯವರು ಹೆಬ್ಬೆಟನ್ನು ಹಾಕುತ್ತಾರೆ ಎಂದರೆ ಸರಿ.

2. ದಾವಾ ಆಸ್ತಿ ನಾವು ವಿಭಾಗ ಮಾಡಿಕೊಂಡಾಗ 1994 ರಲ್ಲಿ ಬಂದಿರುತ್ತದೆ. ಪಾರಿಖತ್ ಪ್ರಕಾರ ಅವರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದ ಪ್ರಕಾರ ಸರ್ವೆ ನಂ-211 ರಲ್ಲಿ ವಿಸ್ತೀರ್ಣ 1 ಎಕರೆ 7 ಗುಂಟೆ ಬಂದಿರುತ್ತದೆ. ಸರ್ವೆ ನಂ-215 ರಲ್ಲಿ 1 ಎಕರೆ 15 ಗುಂಟೆ ನನಗೆ ಬಂದಿರುತ್ತದೆ. ಸರ್ವೆ ನಂ-218 ರಲ್ಲಿ 1 ಎಕರೆ 18 ಗುಂಟೆ, ಸರ್ವೆ ನಂ-211/ 1 ಎಕರೆ 7 ಗುಂಟೆ ನನ್ನ ದೊಡ್ಡಪ್ಪ ರಂಗಪ್ಪ ಇವರಿಗೆ ಬಂದಿರುತ್ತದೆ. ಸರ್ವೆ ನಂ- 211 ರಲ್ಲಿ 1 ಎಕರೆ 7 ಗುಂಟೆ ಸರ್ವೆ ನಂ- 218 ರಲ್ಲಿ 1 ಎಕರೆ 18 ಗುಂಟೆ ಆಂಜನಪ್ಪ ಇವರಿಗೆ ಬಂದಿರುತ್ತದೆ. ನಾನು ಹಾಜರುಪಡಿಸಿರುವ ಪಾರಿಖತ್ ನಲ್ಲಿ ರಂಗದಾಮಯ್ಯ ಎಂಬ ಸಹಿ ಇರುತ್ತದೆ ಎಂದರೆ ಸಾಕ್ಷಿ ಮೊದಲು ಸಹಿ ಮಾಡುತ್ತಿದ್ದರು ಈಗ ಹೆಬ್ಬೆಟ್ಟು ಹಾಕುತ್ತಿದ್ದಾರೆಂದು ಉತ್ತರಿಸಿರುತ್ತಾರೆ. ರಂಗದಾಮಯ್ಯ

ಸಹಿ ಮಾಡುತ್ತಿದ್ದ ದಾಖಲೆ ಬೇರೆ ದಾಖಲೆಗಳನ್ನು ನಾನು ಹಾಜರುಪಡಿಸುತ್ತೇನೆ, ಸದರಿ ಪಾರಿಖತ್ ಪ್ರಕಾರ ರಂಗದಾಯ್ಯನಿಗೆ ಸರ್ವೆ ನಂ- 213 ರಲ್ಲಿ 2 ವರೆ ಎಕರೆ ಬಂದಿರುತ್ತದೆ. ಪಾರಿಖತ್ ನಲ್ಲಿ ಎಲ್ಲಾ ಕಡೆ 14 ಮತ್ತು 4 ರ ಪಕ್ಕ ಒಂದು ಒಂದು ಎಂದು ಸೇರಿಸಲಾಗಿದೆ ಎಂದರೆ ಸರಿಯಲ್ಲ. ಪಾರಿಖತ್ ಗೆ ರಂಗಪ್ಪ ಮತ್ತು ಇತರರು ಸಹಿ ಮಾಡಿರುತ್ತಾರೆ. ಸದರಿ ಪಾರಿಖತ್‌ಗೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ಎಲ್ಲರೂ ಒಪ್ಪಿ ಸಹಿ ಮಾಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

3. ಪಾರಿಖತ್‌ನ್ನು ಯಾರು ಯಾರು ಒಪ್ಪಿಕೊಂಡು ಬರೆದುಕೊಟ್ಟಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ಪಾರಿಖತ್ ಆಗುವ ಮೊದಲು ಅಣ್ಣ ತಮ್ಮಂದಿರ ನಡುವೆ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ವಿಭಾಗ ಪತ್ರ ಆಗುವ ಮೊದಲು ನಾವು ಒಟ್ಟಿಗೆ ಇದ್ದೇವು., ಸದರಿ ಪಾರಿಖತ್ ನ್ನು ಶ್ರೀನಿವಾಸ್ ಎನ್ನುವವರು ಮಧುಗಿರಿಯಲ್ಲಿ ಬರೆದಿರುತ್ತಾರೆ. ಸದರಿ ಪಾರಿಖತ್ ನ್ನು ನಮ್ಮ ಊರಿನ ಹಿರಿಯರು ಹೇಳಿ ಬರೆಸಿರುತ್ತಾರೆ. ಸದರಿ ಪಾರಿಖತ್ ಬರೆಯುವ ಕಾಲಕ್ಕೆ ನಾನು ಯಾವುದೇ ದಾಖಲೆಗಳನ್ನು ತಂದಿರುವುದಿಲ್ಲ. ಪಾರಿಖತ್ ನಲ್ಲಿ ಬರೆದಿರುವ ವಿಚಾರಗಳು ನನ್ನ ಚಿಕ್ಕಪ್ಪ ಚಿನ್ನಪ್ಪಯ್ಯ ಇವರು ಹೇಳಿರುತ್ತಾರೆ. ಸದರಿಯವರ ು ಪಾರಿಖತ್ ಗೆ ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಚಿಕ್ಕಪ್ಪ ಜೀವಂತ ಇರುವುದಿಲ್ಲ. ನಾನು ಹಾಜರುಪಡಿಸಿರುವ ಮುಟೇಷನ್ ಪ್ರತಿಯಲ್ಲಿ ಪಾರಿಖತ್ ಪ್ರಕಾರ ಮುಟೇಷನ್ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಪಹಣಿಯಲ್ಲಿ ಜಂಟಿಯಾಗಿ ಹೆಸರು ಬರುತ್ತಿವೆ ಎಂದರೆ ಸರಿಯಲ್ಲ.

4. ಈ ದಾವೆಯನ್ನು ದಾರಿಗೋಸ್ಕರ ಹಾಕಿರುತ್ತೇನೆ. ದಾವಾ ಆಸ್ತಿಯಲ್ಲಿ ದಾರಿ ಎಂದು ತೋರಿಸಲೂ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಪಾರಿಖತ್ ನಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಾಗೇಶಪ್ಪ ಮತ್ತು ರಂಗದಾಮಯ್ಯ ರವರು ಸರ್ವೆ ನಂ-212 ಮತ್ತು 213 ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸದರಿಯವರು 30 ವರ್ಷಗಳ ಹಿಂದ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ 2 ವರ್ಷಗಳ ಹಿಂದೆ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಹಾಜರುಪಡಿಸಿರುವ ಸ್ಕೆಚ್ ನಲ್ಲಿ ಯಾವುದೇ ಬಂಡಿ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ, ಸದರಿ ಪಾರಿಖತ್ ನಲ್ಲಿ ಯಾವುದೇ ಬಂಡಿ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ- 212 ಮತ್ತು 213 ರ ಜಮೀನುಗಳಲ್ಲಿ ಪ್ರತಿವಾದಿಗಳು ಬೆಳೆ ಇಟ್ಟಿರುತ್ತಾರೆ ಎಂದರೆ ಸರಿ.

5. ನಾನು ದಾವೆಯನ್ನು ಸರ್ವೆ ನಂ- 211 ಮತ್ತು 218 ನೇ ಸರ್ವೆ ನಂಬರ್ ಗಳಿಗೆ ಹಾಕಿರುತ್ತೇನೆ, 211 ಮತ್ತು 218 ಜಮೀನುಗಳ ಪೂರ್ವದ ಕಡೆ ಪಂಚಾಯಿತಿ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಾವು ಪಂಚಾಯಿತಿ ರಸ್ತೆಯಿಂದ ನಮ್ಮ ಜಮೀನುಗಳಿಗೆ ಹೋಗಬಹುದು ಎಂದರೆ ಸರಿಯಲ್ಲ. ಪಂಚಾಯಿತಿ ರಸ್ತೆ ಪ್ರತಿವಾದಿಗಳಿಗೆ ಸಂಬಧಿಸಿದ್ದು ಇರುವುದಿಲ್ಲ ಎಂದರೆ ಸಾಕ್ಷಿ ರಸ್ತೆ ಇಲ್ಲ ಎಂದು ಉತ್ತರಿಸಿರುತ್ತಾರೆ. ನಾಗೇಶಪ್ಪ ಮತ್ತು ರಂಗದಾಮಯ್ಯನ ಮಕ್ಕಳು ದಿ. 24/07/2020 ರಂದು ಒಂದು ಪಾರಿಖತ್ ಮಾಡಿಕೊಂಡಿರುತ್ತಾರೆ ಎಂದರೆ ಇರಬಹುದು ಎಂದು ಉತ್ತರಿಸಿರುತ್ತಾರೆ. ನಾಗೇಶಪ್ಪ ಮತ್ತು ರಂಗದಾಮಯ್ಯ ರವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ಯಾವುದೇ ವಿಭಾಗ ಆಗಿರುವುದಿಲ್ಲ ಹಾಗೂ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ- 212 ಮತ್ತು 213 ರಲ್ಲಿ ಉತ್ತರ - ದಕ್ಷಿಣವಾಗಿ ಯಾವುದೇ ಬಂಡಿ

ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮಗಳ ನಡುವೆ ಯಾವುದೇ ಪಾರಿಖತ್ ಆಗಿರುವುದಿಲ್ಲ ಮತ್ತು ರಂಗದಾಮಯ್ಯ ಸದರಿ ಪಾರಿಖತ್ ಗೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬೆಲೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಬೆಲೆ 10 ಲಕ್ಷ ಬಾಳುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ